ಉಂಟಾಗಿತ್ತು. ಆದರೆ ಆತನ ಏಜೆಂಟರು ಏನೇ ಮಾಡಲು ಹೇಸದವರು. ಸದ್ದಿಲ್ಲದೆ ಹೆಣಗಳು ಉರುಳಿದವು. ಅವನ್ನೆಲ್ಲಾ ಸ್ಮಶಾನದಲ್ಲಿ ಹಾಕಿ ದೆವ್ವಗಳ ಕಾಟವೆಂಬಂತೆ ವ್ಯವಸ್ಥಿತವಾಗಿ ವದಂತಿ ಹರಡಿಸಲಾಯಿತು. ಮುಗ್ಧ ಜನ ಇದನ್ನು ನಿಜವೆಂದೇ ಭಾವಿಸಿ ಹೆದರಿದರು. ವರ್ಷಗಳ ಕಾಲ ಹೀಗೆ ಜನರನ್ನು ವಂಚಿಸಿ ಜಗದೀಶನ ಕಾಳದಂಧೆ ರಗಳೆ, ತಾಪತ್ರಯವಿಲ್ಲದೆ ಮುಂದುವರಿದಿತ್ತು.

ಆದರೆ ಕೆಲ ಸಮಯದ ಹಿಂದ ಮೃತನಾದ ತರುಣನೊಬ್ಬ ಪತ್ರಕರ್ತ ಪ್ರದೀಪನ ಪರಿಚಯದವ. ಆತನಲ್ಲಿ ಕೆಲ ಸಮಯ ಪತ್ರಿಕೋದ್ಯಮ ಕಲಿತಿದ್ದ. ಆತನೂ ಸಾಹಸ ಪ್ರವೃತ್ತಿಯವ. ಅದರಿಂದಾಗಿಯೇ ಜಗದೀಶನ ಅಡ್ಡೆಯ ಗುಟ್ಟನ್ನು ಕಂಡುಕೊಳ್ಳಲು ಹೋಗಿ ಜೀವ ತೆತ್ತಿದ್ದ. ಮೊದ ಮೊದಲು ಈ ಬಗ್ಗೆ ಅಷ್ಟಾಗಿ ಯೋಚಿಸಿರದಿದ್ದ ಪ್ರದೀಪನಿಗೆ, ಕೆದಕಿದಂತೆ ರಹಸ್ಯಗಳ ಮೂಟೆಯೇ ಕಣ್ಣೆದುರು ಬಿದ್ದಿತ್ತು. ಅದನ್ನು ಬಿಡಿಸಲು ಪಣತೊಟ್ಟು ಆತ ಜಿಲ್ಲೆಯ ಹಿರಿಯ ಪೊಲೀಸರೊಂದಿಗೆ ಕೈಜೋಡಿಸಿ, ಯೋಜಿಸಿ, ವ್ಯವಸ್ಥಿತವಾಗಿ ಈ ಕಾರ್ಯಾಚರಣೆ ಕೈಗೊಂಡಿದ್ದ. ರಾತ್ರಿ ಸರಿಯಾಗಿ ಹನ್ನೆರಡು ಗಂಟೆಯಾಗುವಾಗ ಪೊಲೀಸ್ ಪಡೆ ಸ್ಮಶಾನವನ್ನು ತಲುಪುವ ನಿರ್ಧಾರ ಕೈಗೊಳ್ಳಲಾಗಿತ್ತು.

ಪ್ರದೀಪ ಬಸ್ಸಿನಿಂದಿಳಿದಾಗಲೇ ಆತನನ್ನು ಪರೀಕ್ಷಿಸಿದ್ದ ಜಗದೀಶನ ಬಂಟರು ಅನುಮಾನಗೊಂಡಿದ್ದರು. ಆತನ ನಡತೆ ಅವರಿಗೆ ಸಂಶಯ ದೃಢಗೊಳ್ಳಲು ಕಾರಣವಾಗಿತ್ತು. ಸ್ಮಶಾನವೆಲ್ಲಿ ಎಂದು ಆತ ಕೇಳಿದ್ದು ಅವರಿಗೆ ಆತ ತನಿಖೆ ಮಾಡಲಿಕ್ಕೇ ಬಂದಿದ್ದಾನೆಂಬುದನ್ನು ಖಚಿತಪಡಿಸಿತ್ತು. ಹೊಂಚು ಹಾಕಿ ಆತನನ್ನು ಒಂದೇ ಸಾಗ ಹಾಕಲು ಅಥವಾ ಮುಗಿಸಲು ನಿರ್ಧರಿಸಿದ್ದರು.

ಆದರೆ ಆತ ಒಂಟಿಯಾಗಿ ಬಂದಿರಲಿಲ್ಲ ಎಂಬುದನ್ನು ಅವರು ಊಹಿಸಿರಲಿಲ್ಲ. ಬಲಿಗಾಗಿ ತಾನಾಗಿಯೇ ಬಂದ ಕುರಿಯೆಂದೇ ಅವರು ಅವನನ್ನು ಪರಿಗಣಿಸಿದ್ದರು. ದೆವ್ವದ ಕತೆಯನ್ನು ನಂಬುವ ಮೂರ್ಖನೂ ಎದೆಗುಂದುವ ಜಾಯಮಾನದವನೂ ಪ್ರದೀಪನಲ್ಲವೆಂಬುದು ಅವರಿಗೆ ತಿಳಿದಿರಲಿಲ್ಲ. ಆತ ಅವರನ್ನೇ ಬಲಿ ಪಡೆಯಲು ತಯಾರಾಗಿ ಬಂದಿದ್ದ. ಪರಿಣಾಮ, ವರ್ಷಗಳ ಕಾಲ ನಿಗೂಢವಾಗಿ ಕಾಡಿದ್ದ ಭಯಾನಕ ರಹಸ್ಯವೊಂದು ಬಯಲಾಗಿತ್ತು.

## ಡೊನಾಲ್ಡ್ ಪಿರೇರಾ

ಲೇಖಕರು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯವರು. ಕೊಂಕಣಿ ಭಾಷೆಯಲ್ಲಿ ಬರೆಯುವ ಲೇಖಕ, ಪತ್ರಕರ್ತ. ಅವರು 'ರಾಕ್ಣೊ' ಪತ್ರಿಕೆಯ ಅಂಕಣಕಾರರಾಗಿ ಗುರುತಿಸಿಕೊಂಡಿದ್ದಾರೆ. ರಾಜಕೀಯ ವಿಶ್ಲೇಷಣೆಗಳಿಗೆ ಪ್ರಸಿದ್ಧರಾದ ಅವರು ಕನ್ನಡ ಪತ್ರಿಕೆಗಳಿಗೂ ಬರೆಯುತ್ತ ಬಂದಿದ್ದಾರೆ. ಕೊಂಕಣಿಯಲ್ಲಿ ಆರು ಕತೆಗಳು, ಕೊಂಕಣಿ ಹಾಗೂ ಕನ್ನಡದಲ್ಲಿ ಸುಮಾರು 200 ಲೇಖನಗಳು ಪ್ರಕಟವಾಗಿವೆ. ಕೊಂಕಣಿ ಸಾಹಿತ್ಯದಲ್ಲಿ ಸಂಶೋಧನಾತ್ಮಕ ಬರಹಗಳನ್ನು ಪ್ರಕಟಿಸಿದ್ದಾರೆ.